ಗಾಂಧಿನಗರ ಪೋಸ್ಟ್

# ನಿರ್ಮಾಣಕ್ಕಿಳಿದ ಧರ್ಮಣ್ಣ!

**ಹಾಸ್ಯನಟನಾಗಿ ಗುರ್ತಿಸಿಕೊಂಡಿರುವ ನಟ ಧರ್ಮಣ್ಣ ಕಡೂರು ಅವರ ಕೈಯಲ್ಲೀಗ ಸಾಕಷ್ಟು ಅವಕಾಶಗಳಿವೆ. ಹೀರೊಯಿಸಮ್ ಇಲ್ಲದ, ಸಹಜವಾದ ಸನ್ನಿವೇಶಗಳಲ್ಲಿಯೇ ಹಾಸ್ಯ ಉಕ್ಕಿಸುವ ಕಥೆ ಸಿಕ್ಕರೆ ನಾಯಕನಟನಾಗಿ ನಟಿಸಲೂ ಅವರು ಸಿದ್ಧರಿದ್ದಾರೆ.**



■ ಪದ್ಮನಾಭ ಭಟ್

'ರಾಮಾ ರಾಮಾ ರೇ' ಸಿನಿಮಾ ಮೂಲಕ ಚಂದನವನವನ್ನು ಪ್ರವೇಶಿಸಿದ್ದ ಧರ್ಮಣ್ಣ ಕಡೂರು ಈಗ ಸಿನಿಮಾ ನಿರ್ಮಾಣಕ್ಕಿಳಿದಿದ್ದಾರೆ! ಯಾವ ಸಿನಿಮಾ? ಯಾರು ನಿರ್ದೇಶಕರು? ಅವರೂ ಅದರಲ್ಲಿ ನಟಿಸುತ್ತಿದ್ದಾರೆಯೇ? ಈ ಎಲ್ಲ ಪ್ರಶ್ನೆಗಳನ್ನು ಮುಂದಿಟ್ಟರೆ ತಮ್ಮದೇ ವಿಶಿಷ್ಟ ಸ್ಟೈಲ್‌ನಲ್ಲಿ ಚಿಗುರು ಮೀಸೆ ಕೊಂಕಿಸಿ ಮುಸಿಮುಸಿ ನಗುತ್ತಾರೆ. 'ತಡ್ಕಳಿ ತಡ್ಕಳಿ... ಎಲ್ಲ ಗೊತ್ತಾಗತ್ತೆ' ಎಂದು ಕೌತುಕದ ಒಗ್ಗರಣೆಯನ್ನು ಹಾಕಿ ತಮ್ಮ ಐದು ವರ್ಷಗಳ ಸಿನಿಮಾ ಪಯಣದ ಕಡೆಗೆ ಮಾತು ಹೊರಳಿಸುತ್ತಾರೆ.

'ನಾನು ಚಿತ್ರರಂಗಕ್ಕೆ ಬಂದ ಆರಂಭದಲ್ಲಿ ಯಾವುದೋ ನಟರು ಮಾಡಬೇಕಾಗಿದ್ದ ಪಾತ್ರವನ್ನು ಅವರು ಒಪ್ಪಿಕೊಳ್ಳದಿದ್ದರೆ ಅಥವಾ ಕಾಲ್‌ಶೀಟ್ ಸಿಗದಿದ್ದರೆ ನನಗೆ ಕೊಡುತ್ತಿದ್ದರು. ಆದರೆ ಈ ಐದು ವರ್ಷಗಳಲ್ಲಿ ಪರಿಸ್ಥಿತಿ ಬದಲಾಗಿದೆ. ಈಗ ಕಥೆ ಬರೆಯುವಾಗಲೇ ನನಗಂತಲೇ ಟ್ರ್ಯಾಕ್ ಬರೆಯುತ್ತಾರೆ. ಸ್ಕ್ರಿಪ್ಟ್‌ನಲ್ಲಿ 'ಧರ್ಮಣ್ಣ' ಎಂಬ ಹೆಸರೇ ಇಟ್ಟುಕೊಂಡು ಬರೆಯುತ್ತಿದ್ದಾರೆ. ನನ್ನ ಮಟ್ಟಿಗಂತೂ ಇದು ಖುಷಿಯ ವಿಷಯವೇ' ಎನ್ನುವ ಧರ್ಮಣ್ಣ ಅವರ ಕೈಯಲ್ಲಿ ಈಗ ಹಲವು ಸಿನಿಮಾಗಳಿವೆ.

ಗಣೇಶ್ ನಟನೆಯ 'ಸಖತ್', ಧನ್ವೀರ್ ನಟನೆಯ 'ಬೈಟು ಲವ್', ಪ್ರವೀಣ್ ಕುಮಾರ್ ನಿರ್ದೇಶನದ 'ಅಮರಪ್ರೇಮಿ ಅರುಣ್' ಸಿನಿಮಾಗಳಲ್ಲಿ ಅವರು ನಟಿಸುತ್ತಿದ್ದಾರೆ. 'ಉಪಾಧ್ಯಕ್ಷ' ಸಿನಿಮಾದಲ್ಲಿಯೂ ಅವರಿಗೊಂದು ಪಾತ್ರ ಇರುವುದು ಬಹುತೇಕ ಖಚಿತವಾಗಿದೆ. ಇವಲ್ಲದೆ ಇನ್ನೊಂದಿಷ್ಟು ಹೊಸ ಕತೆಗಳನ್ನೂ ಕೇಳುತ್ತಿದ್ದಾರೆ. ಈ ವರ್ಷ ಬಿಡುಗಡೆಯಾದ 'ಇನ್‌ಸ್ಪೆಕ್ಟರ್ ವಿಕ್ರಮ್' ಮತ್ತು 'ರಾಬರ್ಟ್' ಸಿನಿಮಾಗಳಲ್ಲಿ ಇವರ ಪಾತ್ರಗಳಿಗೆ ಸಾಕಷ್ಟು ಮೆಚ್ಚುಗೆ ಕೂಡ ಬಂದಿದೆ. ಒಟ್ಟಿನಲ್ಲಿ ಧರ್ಮಣ್ಣನ ಮುಸಿನಗೆ ಪ್ರೇಕ್ಷಕರಿಗೆ ದಾಟುವಷ್ಟರಲ್ಲಿ ಹೊಟ್ಟೆ ಹುಣ್ಣಾಗಿಸುವ ಗಹಗಹಿಕೆಯಾಗುತ್ತದೆ ಎಂದು ಗಾಂಧಿನಗರ ಮಂದಿಗೆ ಗೊತ್ತಾಗಿದೆ. ಅವರೀಗ 'ವರ್ಕ್' ಆಗುವ ನಟ!

ಈಗ ಕನ್ನಡ ಚಿತ್ರರಂಗದ ಹಾಸ್ಯನಟರಿಗೆ ಸಂಕ್ರಮಣ ಕಾಲ. ಒಂದೆಡೆ ಜಗ್ಗೇಶ್, ಸಾಧುಕೋಕಿಲ ಅವರಂಥ ಹಿರಿಯ ನಟರು, ಇನ್ನೊಂದೆಡೆ ಕುರಿ ಪ್ರತಾಪ್, ಚಿಕ್ಕಣ್ಣ ಅವರಂಥ ಬೇಡಿಕೆಯ ನಟರು, ನಂತರದ ಪೀಳಿಗೆಯ ಶಿವರಾಜ್ ಕೆ.ಆರ್. ಪೇಟೆ, ಗಿರಿ, ಧರ್ಮಣ್ಣ ಅವರಂಥ ಯುವ ನಟರು – ಹೀಗೆ ಮೂರು ತಲೆಮಾರುಗಳ ಹಾಸ್ಯನಟರು ಒಟ್ಟೊಟ್ಟಿಗೇ ಮಿಂಚುತ್ತಿರುವ ಕಾಲವಿದು. ಈ ಕುರಿತೂ ಧರ್ಮಣ್ಣ ಅವರಿಗೆ ಖುಷಿ ಇದೆ.

'ನಾಯಕ ನಟನಿಗೆ ವಯೋಮಿತಿ ಅನ್ನುವುದು ಇರುತ್ತದೆ. ಒಂದು ವಯಸ್ಸಿನ ನಂತರ ಅವರು ಹೀರೊ ಆಗಿ ನಟಿಸಲು ಸಾಧ್ಯವಿಲ್ಲ. ಆದರೆ ಹಾಸ್ಯನಟರಿಗೆ ಹಾಗಲ್ಲ. ಎಲ್ಲಿಯವರೆಗೆ ಪ್ರೇಕ್ಷಕರನ್ನು ನಗಿಸುತ್ತೀರೋ ಅಲ್ಲಿಯವರೆಗೂ ಹಾಸ್ಯನಟರೇ. ಇಲ್ಲಿ ಹಿರಿಯ, ಕಿರಿಯ, ಮಧ್ಯಮ ಎಂದೆಲ್ಲ ಇರುವುದಿಲ್ಲ. ಹಾಗಾಗಿಯೇ ಈಗ ಸಾಧುಕೋಕಿಲ, ಜಗ್ಗೇಶ್ ಅವರಂಥ ಹಿರಿಯ ನಟರೂ ನಮ್ಮಂಥ ಕಿರಿಯರೂ ಒಟ್ಟೊಟ್ಟಿಗೇ ಚಿತ್ರರಂಗದಲ್ಲಿ ಕೆಲಸ ಮಾಡಲು ಸಾಧ್ಯವಾಗುತ್ತಿದೆ' ಎನ್ನುತ್ತಾರೆ.

ಹಾಸ್ಯನಟರಿಗೆ ವಯಸ್ಸಿನ ಮಿತಿ ಇಲ್ಲ ಎನ್ನುವುದೇನೋ ನಿಜ. ಆದರೆ ಸದಾ ತಮ್ಮನ್ನು ತಾವು ಹೊಸತನಕ್ಕೆ ಒಡ್ಡಿಕೊಳ್ಳಬೇಕಾದ, ಬದಲಾದ ಪ್ರೇಕ್ಷಕರ ಅಭಿರುಚಿಗೆ ಒಗ್ಗಿಕೊಳ್ಳಬೇಕಾದ ಸವಾಲು ಉಳಿದ ನಟರಿಗಿಂತ ಹೆಚ್ಚು ಹಾಸ್ಯನಟರಿಗೆ ಇರುತ್ತದೆ ಎಂಬ ಪ್ರಜ್ಞೆಯೂ ಧರ್ಮಣ್ಣ ಅವರಿಗಿದೆ.

'ಭಾಷೆ ತುಂಬ ಮುಖ್ಯ. ಪ್ರಾದೇಶಿಕ ಭಾಷೆಯ ಸೊಗಡು ಬಹುಬೇಗ ಪ್ರೇಕ್ಷಕರನ್ನು ಹತ್ತಿರಕ್ಕೆ ಸೆಳೆದುಕೊಳ್ಳುತ್ತದೆ. ನಾನು ಕಡೂರಿನಲ್ಲಿ ಹುಟ್ಟಿ ಬೆಳೆದವನು. ಅಲ್ಲಿನ ಭಾಷೆಗೆ ಒಂದು ವೈಶಿಷ್ಟ್ಯವಿದೆ. ಅದನ್ನು ನನ್ನ ಬಾಡಿ ಲಾಂಗ್ವೇಜಿಗೆ ಒಗ್ಗಿಸಿಕೊಂಡು ಸಿನಿಮಾದಲ್ಲಿ ಬಳಸಿಕೊಂಡಾಗ ಅದು ತುಂಬ ಸಹಜವಾಗಿಯೂ ನಕ್ಕು ನಗಿಸುವ ಹಾಗೆಯೇ ಇರುತ್ತದೆ. ನಮ್ಮ ಬಾಡಿ ಲಾಂಗ್ವೇಜ್ ಶಕ್ತಿಯನ್ನು ಅರ್ಥಮಾಡಿಕೊಳ್ಳುವುದು